# ಬೋಲ್ಡ್ ಅಂಡ್...

ಸರಸ ಸಲ್ಲಾಪದ ದೃಶ್ಯಗಳು ದೊಡ್ಡ ಪರದೆಯ ಮೇಲೆ ಕಾಣುತ್ತಿದ್ದವು. ಅದರಲ್ಲಿ ಮಾದಕವಾಗಿದ್ದ ನಟಿ ತನ್ನನ್ನು ತಾನೇ ನೋಡಿಕೊಳ್ಳುತ್ತಾ ಮುಗುಳ್ನಕ್ಕರು. ಐಷಾರಾಮಿ ಹೋಟೆಲ್‌ನ ಔತಣಕೂಟದಲ್ಲಿ ನೆರೆದಿದ್ದವರಲ್ಲಿ ಕೆಲವರು ನಟಿಯತ್ತ ಆಗೀಗ ತುಂಟ ನೋಟ ಬೀರಿದರು. ಸೊಂಟಕ್ಕಿಂತ ತುಸು ಕೆಳಗಿನ ಭಾಗದವರೆಗೆ ಮುಚ್ಚುವಷ್ಟು ಬಟ್ಟೆ ತೊಟ್ಟಿದ್ದ ನಟಿ ಕಾಲಮೇಲೆ ಕಾಲುಹಾಕಿ ಹಸನ್ಮುಖಿಯಾಗಿ ಕುಳಿತಿದ್ದರು. 'ನನಗೇನೂ ಮುಜುಗರವಿಲ್ಲ' ಎಂದು ಅವರು ನಿಸ್ಸಂಕೋಚವಾಗಿ ಹೇಳಿದರು. ಹಿಂದಿಯಲ್ಲಿ ಮಲ್ಲಿಕಾ ಶೆರಾವತ್ ಅಭಿನಯಿಸಿದ್ದ ಪಾತ್ರವನ್ನು ಅವರು ಕನ್ನಡದ ರೀಮೇಕ್ ಚಿತ್ರದಲ್ಲಿ ನಿರ್ವಹಿಸಿದ್ದರು. ಚೊಚ್ಚಲ ಕನ್ನಡ ಸಿನಿಮಾದಲ್ಲೇ ಅಂಥ ಅವಕಾಶ ಸಿಕ್ಕಿದ್ದಕ್ಕೆ ಅವರಲ್ಲಿ ಧನ್ಯತಾ ಭಾವ. 'ಹಿಂದಿ ಚಿತ್ರದ ಹಾಡಿಗೆ ಸರಿಸಮಾನವಾಗಿಯೇ ಇರಬೇಕಲ್ಲ. ಅದಕ್ಕೇ ಇಷ್ಟು ಬೋಲ್ಡಾಗಿದೆ' ಎಂದು ನಿರ್ದೇಶಕರು ಹೆಮ್ಮೆಯಿಂದ ಹೇಳಿಕೊಂಡರೆ, ನಿರ್ಮಾಪಕರೂ ಅದನ್ನು ಅನುಮೋದಿಸಿದರು.

ಸಿಂಧಿ ಸಮುದಾಯಕ್ಕೆ ಸೇರಿದ ನಾಯಕಿ ಓದಿ, ಬೆಳೆದದ್ದೆಲ್ಲ ಬೆಂಗಳೂರಿನಲ್ಲಿಯೇ. ವಿಪರೀತ 'ಬೋಲ್ಡ್' ಆಗಿ ಕನ್ನಡ ಚಿತ್ರದಲ್ಲಿ ಕಾಣಿಸಿಕೊಳ್ಳುವ ಮೊದಲು ತಮಿಳಿನ ಸಿನಿಮಾವೊಂದರಲ್ಲಿ ಅಭಿನಯಿಸಿ ಬಂದಿದ್ದರು. ಅಲ್ಲಿ ಅವರಿಗೆ ಅದೃಷ್ಟ ಕೈಹಿಡಿಯಲಿಲ್ಲ. ಕನ್ನಡದಲ್ಲಿ ಕೂಡ ಪ್ರೇಕ್ಷಕರಿಂದ 'ಬೋಲ್ಡ್' ಹಾಡಿದ್ದ ಚಿತ್ರಕ್ಕೆ ಬಂದ ಪ್ರತಿಕ್ರಿಯೆ ಅಷ್ಟಕ್ಕಷ್ಟೆ. ಆದರೆ, ನಟೀಮಣಿಯ ವೃತ್ತಿಬದುಕಿಗೆ ಅದು ಬೆಳ್ಳಿಗೆರೆಯಾಯಿತು. ಅವರ ಬಯೋಡೇಟಾ ಸುಧಾರಿಸಿತು. ತಮಿಳು, ತೆಲುಗು ಚಿತ್ರಲೋಕಗಳಲ್ಲೂ ಅಡ್ಡಾಡಿ ಬಂದರು.

ಸಾಮಾಜಿಕ ಜಾಲತಾಣಗಳಲ್ಲಿ ಚುರುಕಾಗಿ ಕಾಣಿಸಿಕೊಳ್ಳತೊಡಗಿದ ಅವರು, ಸಣ್ಣ ಸಣ್ಣ ಕದಲಿಕೆಗಳ ಚಿತ್ರಗಳನ್ನೆಲ್ಲ ದಾಖಲಿಸುವುದರಲ್ಲಿ ನಿಸ್ಸೀಮರು. ಪರಿಚಯವಾಗುವ ಮಾಧ್ಯಮದವರಿಗೆ ವೈದ್ಯರು ಮಾತ್ರೆಯ ಡೋಸು ಕೊಡುವಷ್ಟೇ ಶ್ರದ್ಧೆಯಿಂದ ಮೆಸೇಜುಗಳನ್ನು ಕಳುಹಿಸುತ್ತಾರೆ. 'ಗುಡ್ ಮಾರ್ನಿಂಗ್'ನಿಂದ ಹಿಡಿದು 'ಗುಡ್ ನೈಟ್'ವರೆಗೆ ಈ ಮೆಸೇಜುಗಳ ವ್ಯಾಪ್ತಿ ಸೀಮಿತಗೊಳ್ಳದೆ ತಮ್ಮ ವೃತ್ತಿಬದುಕಿನ 'ಅಪ್‌ಡೇಟ್'ಗಳನ್ನೂ ಆ ಸಂದೇಶಗಳ ಮೂಲಕ ಮಾಡುವ ಜಾಣತನ ಅವರದ್ದು. ತಮ್ಮ 'ಮೀಡಿಯೋಕರ್' ಗುಣದಿಂದಾಗಿಯೇ ಮಲಯಾಳಂನಲ್ಲಿ ಮೋಹನ್ ಲಾಲ್, ಶ್ರಿಯಾ ಸರಣ್ ಅಭಿನಯಿಸಿದ ಸಿನಿಮಾದಲ್ಲೂ ಅವಕಾಶ ಗಿಟ್ಟಿಸಿದರು. ಸೆಲೆಬ್ರಿಟಿ ಕ್ರಿಕೆಟ್ ಲೀಗ್‌ನಲ್ಲಿ ಕಾಣಿಸಿಕೊಳ್ಳುವ ಲಲನೆಯರ ಸಾಲಿನಲ್ಲಿ ಅವರು ಇದ್ದೇ ಇರುತ್ತಾರೆ. ಪ್ರೇಕ್ಷಕರಿಗೆ ಮಾತ್ರ ಅವರ ಅಭಿನಯದ ಬಹುಪಾಲು ಚಿತ್ರಗಳ ಹೆಸರು ನೆನಪಿನಲ್ಲಿ ಉಳಿದಿಲ್ಲ!

● **ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68